**ಪಿ.ಡಬ್ಲ್ಯು: 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ** 02-06-2026

ಈ ದಿನ ನಾನು ನ್ಯಾಯಾಲಯಕ್ಕೆ ನನ್ನ ಲಿಖಿತ ಸತ್ಯ ಪ್ರತಿಜ್ಞೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಿರುತ್ತವೆ ಮತ್ತು ಅವುಗಳ ಅಂಶವನ್ನು ಓದಿ ನಾನೇ ಸಹಿ ಮಾಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆಃ ಪಿರ್ಯಾದಿ ವಕೀಲರಿಂದ.**

ನಾನು ಈ ಪ್ರಕರಣದಲ್ಲಿ ಪಿರ್ಯಾದಿ ಸಂಸ್ಥೆಯ ಪ್ರತಿನಿಧಿಯಾಗಿದ್ದು. ಪ್ರಕರಣಕ್ಕೆ ಸಂಬಂಧಪಟ್ಟಂತೆ ಒಂದು ಮೂಲ ಚೆಕ್ಕ, ಒಂದು ಬ್ಯಾಂಕ ಮೆಮೋ ಹಾಜರುಪಡಿಸಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು 2 ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿರುವ ಅಪಾದಿತರ ಸಹಿಯನ್ನು ಗುರುತಿಸುತ್ತೇನೆ. ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಅದೇ ರೀತಿ ವಕೀಲರ ಮುಖಾಂತರ ಆರೋಪಿಗೆ ನೀಡಿದ ನೋಟಿಸಿನ ಪ್ರತಿ, ಒಂದು ಅಂಚೆ ರಶೀದಿ ಹಾಜರುಪಡಿಸದ್ದು ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಯಿತು. ಆಪಾದಿತರಿಗೆ ನೋಟಿಸ ಜಾರಿಯಾಗದೆ ಹಿಂದಿರುಗಿ ಬಂದ ಅಂಚೆ ಲಕೋಟೆಯನ್ನು ಹಾಜರುಪಡಿಸಸಿದ್ದು ಅದನ್ನು ತೆರೆದ ನ್ಯಾಯಾಲಯದಲ್ಲಿ ಬಿಡಿಸಿ ನೋಡಲಾಯಿತು. ಅಂಚೆ ಲಕೋಟೆಯನ್ನು ನಿಪಿ-5 ಎಂದು ಮತ್ತು ಅದರಲ್ಲಿರುವ ನೋಟಿಸಿನ ಪ್ರತಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಎರಡು ಠರಾವಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ಅನುಕ್ರಮವಾಗಿ ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಪಿರ್ಯಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ವಿನಂತಿ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.)**

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು).**

**ಓ ಹೇ ಕೇ ಸರಿ ಇದೆ.**

**Sd/-**

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು**

**ಜೆ.ಎಂ.ಎಫ್.ಸಿ., ಭಟ್ಕಳ**